# ಇಸ್ಲಾಮಿಕ್ ಸ್ಟೇಟ್ ವಿನಾಶ

## ಒಂದು ಪ್ರತ್ಯಕ್ಷ ವರದಿ

ನಾಗರಿಕತೆಯ ತೊಟ್ಟಿಲುಗಳಲ್ಲೊಂದಾದ ಮಧ್ಯಪ್ರಾಚ್ಯ ಈಗ ಸಾವುನೋವಿನ ಕೊಳ್ಳ. ಅಲ್ಲಿ ನಿತ್ಯವೂ ಮದ್ದುಗುಂಡುಗಳ ರುದ್ರನರ್ತನ. ಇರಾಕ್ ಮೇಲೆ ಅಮೆರಿಕ ಸೇನಾ ಕಾರ್ಯಾಚರಣೆ, ಇರಾಕ್ ಪ್ರತಿದಾಳಿ – ಇದೆಲ್ಲದರ ನಂತರ ಸಿರಿಯಾದಲ್ಲೀಗ ಸೂತಕದ ಮನೆಯಲ್ಲಿ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನಗಳು ನಡೆದಿವೆ. ಐಸಿಸ್‌ನ ಬೀಜಗಳಿನ್ನೂ ಎಲ್ಲೋ ಉಳಿದಿರಬಹುದು ಎನ್ನುವ ಆತಂಕವನ್ನು ಉಸಿರಾಡುತ್ತಲೇ ಹೊಸ ಬೆಳಕಿಗೆ ಸಿರಿಯಾ ಹಂಬಲಿಸುತ್ತಿದೆ. ಐಸಿಸ್ ಉಗ್ರರ ವಿಧ್ವಂಸಕ ಕೃತ್ಯದ ಅವಶೇಷಗಳನ್ನು ಗುರುತಿಸುವುದಕ್ಕಾಗಿ ಇಂಗ್ಲಿಷ್‌ನ ಪ್ರಮುಖ ವಾರಪತ್ರಿಕೆ 'ದಿ ವೀಕ್' ತನ್ನ ಪ್ರತಿನಿಧಿಗಳನ್ನು ಸಿರಿಯಾಗೆ ಕಳಿಸಿತ್ತು. ಅಲ್ಲಿನ ವಾಸ್ತವದ ಚಿತ್ರವನ್ನು ಹಿರಿಯ ಫೋಟೊ ಜರ್ನಲಿಸ್ಟ್ ಭಾನುಪ್ರಕಾಶ ಚಂದ್ರ ತಮ್ಮ ಕ್ಯಾಮೆರಾ ಕಣ್ಣಿನಲ್ಲಿ ಸೆರೆಹಿಡಿದಿದ್ದಾರೆ. ತಮ್ಮ ಕಣ್ಣೋಟದ ವಿವರವನ್ನು ಅವರು 'ಸುಧಾ' ಪ್ರತಿನಿಧಿಯೊಂದಿಗೆ ಹಂಚಿಕೊಂಡಿದ್ದಾರೆ.

■ **ನಿರೂಪಣೆ: ರಾಘವೇಂದ್ರ ಕೆ.**
ಛಾಯಾಚಿತ್ರಗಳ ಸೌಜನ್ಯ: **ದಿ ವೀಕ್**

